ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **557(646)** |
| ಮಾನ್ಯ ಸದಸ್ಯರ ಹೆಸರು | **ಶ್ರೀ ತಿಪ್ಪಣ್ಣಪ್ಪ ಕಮಕನೂರು (ನಾಮನಿರ್ದೇಶಿತರು)** |
| ಉತ್ತರಿಸುವ ಸಚಿವರು | **ಉನ್ನತ ಶಿಕ್ಷಣ ಸಚಿವರು** |
| ಉತ್ತರಿಸಬೇಕಾದ ದಿನಾಂಕ | **09.03.2026** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಬೋದಕ ಸಿಬ್ಬಂದಿ ಕೊರತೆ ಮತ್ತು ಶೈಕ್ಷಣಿಕ ಒತ್ತಡದಿಂದಾಗಿ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ಇತ್ತೀಚಿನ ನಿರ್ದೇಶನಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ರಾಜ್ಯದ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಪ್ರಸ್ತುತ ಎಷ್ಟು ಕುಲಪತಿ (VC), ಕುಲಸಚಿವ (Register) ಮತ್ತು ಬೋಧಕ ಹುದ್ದೆಗಳು ಖಾಲಿ ಇವೆ; (ವಿಶ್ವವಿದ್ಯಾಲಯವಾರು ಹಾಗೂ ಹುದ್ದೆವಾರು ಸಂಪೂರ್ಣ ವಿವರ ನೀಡುವುದು) | ರಾಜ್ಯದ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಪ್ರಸ್ತುತ ಖಾಲಿಯಿರುವ ಕುಲಪತಿ, ಕುಲಸಚಿವ ಮತ್ತು ಬೋಧಕ ಹುದ್ದೆಗಳ ಮಾಹಿತಿಯ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |
| ಇ) | ಸುಪ್ರೀಂ ಕೋರ್ಟ್ ಸೂಚಿಸಿರುವಂತೆ ನಾಲ್ಕು ತಿಂಗಳ ಕಾಲಮಿತಿಯೊಳಗೆ ಈ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ರಾಜ್ಯದ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡುವಂತೆ ಸರ್ಕಾರದಿಂದ ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ದಿನಾಂಕ 13.02.2025 ಮತ್ತು 09.05.2025 ರಂದು ಸಭೆಗಳನ್ನು ನಡೆಸಿದ್ದು, ಇದುವರೆಗೂ ಶಿಫಾರಸ್ಸುಗಳನ್ನು ನೀಡಿರುವುದಿಲ್ಲ.<br><br>ಸದರಿ ಸಮಿತಿಯು ನೀಡುವ ಶಿಫಾರಸ್ಸುಗಳನ್ನು ಪರಿಶೀಲಿಸಿ, ಸಚಿವ ಸಂಪುಟದ ಮುಂದೆ ಮಂಡಿಸಿ ವಿಶ್ವವಿದ್ಯಾಲಯಗಳಲ್ಲಿನ ಖಾಲಿ ಹುದ್ದೆಗಳನ್ನು ತುಂಬಲು ಅಗತ್ಯ ಕ್ರಮವನ್ನು ಕೈಗೊಳ್ಳಲಾಗುತ್ತದೆ. |
| ಈ) | ರಾಜ್ಯ ಸರ್ಕಾರ ಮತ್ತು ರಾಜ್ಯಪಾಲರ ನಡುವಿನ ಸಂಘರ್ಷದಿಂದಾಗಿ ಕುಲಪತಿಗಳ ನೇಮಕಾತಿ ಪ್ರಕ್ರಿಯೆ ನನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ | ಗಮನಕ್ಕೆ ಬಂದಿರುವುದಿಲ್ಲ.<br>ಈ ಸಂಬಂಧ ಯಾವುದೇ ಕಾನೂನಾತ್ಮಕ ಸಮಸ್ಯೆ ಉದ್ಭವಿಸಿರುವುದಿಲ್ಲ. |

| | | |
|---|---|---|
| | ಕಾನೂನಾತ್ಮಕ ಸವಾಲುಗಳನ್ನು ಬಗೆಹರಿಸಿ ಶೈಕ್ಷಣಿಕ ಹಿತದೃಷ್ಟಿಯಿಂದ ತ್ವರಿತ ನೇಮಕಾತಿ ಮಾಡಲು ಸರ್ಕಾರ ರೂಪಿಸಿರುವ ಕಾರ್ಯತಂತ್ರವೇನು: | |
| ಉ) | ಬಾಕಿ ಉಳಿದಿರುವ ವಿದ್ಯಾರ್ಥಿ ವೇತನಗಳನ್ನು (Scholarships) ನಾಲ್ಕು ತಿಂಗಳೊಳಗೆ ವಿತರಿಸಬೇಕೆಂಬ ನ್ಯಾಯಾಲಯದ ಆದೇಶದಂತೆ ರಾಜ್ಯದಲ್ಲಿ ಪ್ರಸ್ತುತ ಎಷ್ಟು ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ವಿತರಣೆ ಬಾಕಿ ಇದೆ; ಇದನ್ನು ಪಾವತಿಸಲು ಸರ್ಕಾರ ಅನುದಾನ ಮೀಸಲಿಟ್ಟಿದೆಯೇ: | ಉನ್ನತ ಶಿಕ್ಷಣ ಇಲಾಖೆಯಿಂದ ವಿದ್ಯಾರ್ಥಿ ವೇತನವನ್ನು ಬಿಡುಗಡೆ ಮಾಡಲಾಗುವುದಿಲ್ಲ, ಬದಲಾಗಿ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಎಸ್.ಎಸ್.ಪಿ. ಪೋರ್ಟಲ್ ಮುಖಾಂತರ ನೇರವಾಗಿ ವಿದ್ಯಾರ್ಥಿಗಳ ಖಾತೆಗೆ ವಿದ್ಯಾರ್ಥಿ ವೇತನವನ್ನು ಬಿಡುಗಡೆ ಮಾಡಲಾಗುತ್ತಿದೆ. |
| ಊ) | ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳನ್ನು ತಡೆಗಟ್ಟಲು ಮತ್ತು ಅವರ ಮಾನಸಿಕ ಒತ್ತಡ ನಿವಾರಿಸಲು ಶೈಕ್ಷಣಿಕ ಸಂಸ್ಥೆಗಳಲ್ಲಿ ಕೌನ್ಸೆಲಿಂಗ್ ಕೇಂದ್ರಗಳನ್ನು ಸ್ಥಾಪಿಸುವ ಮತ್ತು 'ಆತ್ಮಹತ್ಯೆ ದಾಖಲೆ ನಿರ್ವಹಣಾ ವ್ಯವಸ್ಥೆ'ಯನ್ನು ಜಾರಿಗೊಳಿಸುವ ಸುಪ್ರೀಂ ಕೋರ್ಟ್ ನಿರ್ದೇಶನವನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗಿದೆಯೇ? | ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿದ್ಯಾರ್ಥಿಗಳ ಆತ್ಮಹತ್ಯಾ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹೊರಡಿಸಿರುವ ಮಾರ್ಗಸೂಚಿಗಳನ್ವಯ ಕರ್ನಾಟಕ ಸರ್ಕಾರ ರಚಿಸಿರುವ ಉನ್ನತ ಮಟ್ಟದ ಸಮಿತಿಯು ಸಿದ್ಧಪಡಿಸಿರುವಂತೆ ದಿನಾಂಕ:27.11.2025ರಂದು ಹೊರಡಿಸಲಾಗಿರುವ ಸುತ್ತೋಲೆ ಸಂಖ್ಯೆ: ಇಡಿ 69 ಯುಪಿಸಿ 2025 ರಲ್ಲಿ ನೀಡಿರುವ ಮಾರ್ಗಸೂಚಿಗಳನ್ವಯ ಕ್ರಮವಹಿಸಲಾಗುತ್ತಿದೆ.<br><br>1. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ in-house counsellor ಗಳ ನೇಮಕಾತಿಗೆ ಸಂಬಂಧಪಟ್ಟಂತೆ ಕ್ರಮವಹಿಸಲಾಗುತ್ತಿದೆ.<br>2. ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು, ಬೋಧಕರು ಮತ್ತು ಪ್ರಾಂಶುಪಾಲರುಗಳಿಗೆ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಹಾಗೂ ಆತ್ಮಹತ್ಯಾ ಪ್ರಕರಣಗಳ ನಿವಾರಣೆಗೆ ಸಂಬಂಧಪಟ್ಟಂತೆ ಮಾನಸಿಕ ತಜ್ಞರಿಂದ ಹಾಗೂ ಮಾನಸಿಕ ಸೇವಾದಾರರಿಂದ ತರಬೇತಿ ಕೊಡಿಸಲು ಕ್ರಮವನ್ನು ವಹಿಸಲಾಗುತ್ತಿದೆ.<br>3. ದಿನಾಂಕ:27.02.2026 ರಂದು ನಡೆದ ಮಾದಕ ವಸ್ತುಗಳ ನಿರ್ಮೂಲನೆಯ ಕುರಿತು ನಡೆದ ಸಮಾವೇಶದಲ್ಲಿ ಮಾದಕ ವಸ್ತುಗಳ ಬಳಕೆಯಿಂದ ಆತ್ಮಹತ್ಯಾ ಪ್ರಕರಣಗಳು ನಡೆಯುವುದನ್ನು ತಡೆಗಟ್ಟುವ ಕುರಿತು ಜಾಗೃತಿ/ಮಾಹಿತಿ/ಅರಿವನ್ನು ಮೂಡಿಸಲಾಯಿತು. ಅದೇ ರೀತಿ ಮತ್ತೊಂದು ಸಮಾವೇಶವನ್ನು |

| | | |
|---|---|---|
| | | ಶೀಘ್ರದಲ್ಲಿಯೇ ಆಯೋಜಿಸಲಿದ್ದು ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ವರ್ಧನೆಯ ಕುರಿತು ಸದರಿ ಸಮಾವೇಶದಲ್ಲಿ ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಎಲ್ಲಾ ಅಧ್ಯಾಪಕರಿಗೆ ಮಾಹಿತಿ ನೀಡಲಾಗುತ್ತದೆ. |

ಸಂಖ್ಯೆ: ಇಡಿ 52 ಅಲಅವಿ 2026

(ಡಾ|| ಎಂ.ಸಿ ಸುಧಾಕರ್)
ಉನ್ನತ ಶಿಕ್ಷಣ ಸಚಿವರು

ಅನುಬಂಧ-1

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣ ಕಮನೂರ ಇವರ ಚುಕ್ಕೆ ಗುರುತಿಲ್ಲದ ಪ್ರ.ಸಂ. 557 (646)

| ಕ್ರ. ಸಂ. | ವಿಶ್ವವಿದ್ಯಾಲಯದ ಹೆಸರು | ರಾಜ್ಯದ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಕುಲಪತಿ (VC), ಕುಲಸಚಿವ (Register) ಮತ್ತು ಬೋಧಕ ಹುದ್ದೆಗಳು ಖಾಲಿಯಿರುವ ವಿವರ | | |
|---|---|---|---|---|
| | | ಕುಲಪತಿ(VC), | ಕುಲಸಚಿವ (Register) | ಬೋಧಕ ಹುದ್ದೆಗಳು |
| 1. | ಕನ್ನಡ ವಿಶ್ವವಿದ್ಯಾಲಯ, ಹಂಪಿ | - | - | 38 |
| 2. | ಕೊಡಗು ವಿಶ್ವವಿದ್ಯಾಲಯ | - | 01 | 80 |
| 3. | ಮಂಡ್ಯ ವಿಶ್ವವಿದ್ಯಾಲಯ | ಖಾಲಿಯಿದ್ದು, ಪ್ರಸ್ತುತ ಪ್ರಭಾರದಲ್ಲಿ ಪ್ರೊ.ಕೆ.ಶಿವಚಿತ್ರಪ್ಪ ಇವರು ಕಾರ್ಯನಿರ್ವಹಿಸುತ್ತಿದ್ದಾರೆ. | ಖಾಲಿಯಿದ್ದು, ಪ್ರಸ್ತುತಪ್ರಭಾರದಲ್ಲಿ ಎಂ.ಪಿ. ಕೃಷ್ಣಕುಮಾರ್, ಕೆ.ಎ.ಎಸ್, ಇವರುಕಾರ್ಯನಿರ್ವಹಿಸುತ್ತಿದ್ದಾರೆ. | 92 |
| 4. | ಹಾಸನ ವಿಶ್ವವಿದ್ಯಾಲಯ | - | - | 27 |
| 5. | ಬೀದರ್ ವಿಶ್ವವಿದ್ಯಾಲಯ | - | 01 | 29 |
| 6. | ಬೆಂಗಳೂರು ವಿಶ್ವವಿದ್ಯಾಲಯ | - | - | 251 |
| 7. | ಬಾಗಲಕೋಟೆ ವಿಶ್ವವಿದ್ಯಾಲಯ | | - | 09 |
| 8. | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ | | - | 47 |
| 9. | ಡಾ.ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ. ವಿಶ್ವವಿದ್ಯಾಲಯ | - | - | 17 |
| 10. | ಬೆಂಗಳೂರು ಉತ್ತರ ವಿಶ್ವವಿದ್ಯಾಲಯ | - | - | 69 |
| 11. | ಕುವೆಂಪು ವಿಶ್ವವಿದ್ಯಾಲಯ | -- | | 133 |
| 12. | ಮಂಗಳೂರುವಿಶ್ವವಿದ್ಯಾಲಯ | - | 01 | 153 |
| 13. | ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ | ಖಾಲಿಯಿದ್ದು, ಪ್ರಸ್ತುತ ಪ್ರಭಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. | - | 272 |
| 14. | ಕರ್ನಾಟಕ ವಿಶ್ವವಿದ್ಯಾಲಯ | - | | 245 |
| 15 | ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ | - | - | 47 |
| 16. | ದಾವಣಗೆರೆ ವಿಶ್ವವಿದ್ಯಾಲಯ | - | - | 29 |
| 17. | ತುಮಕೂರು ವಿಶ್ವವಿದ್ಯಾಲಯ | - | - | 104 |

-2

| | | | | |
|---|---|---|---|---|
| 18. | ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ | - | - | 151 |
| 19. | ವಿಜಯನಗರ ಶ್ರೀ ಕೃಷ್ಣ ದೇವರಾಯ ವಿಶ್ವವಿದ್ಯಾಲಯ | - | ಖಾಲಿಯಿದ್ದು, ಪ್ರಸ್ತುತ ಪ್ರಭಾರದಲ್ಲಿ ಕುಲಸಚಿವರು (ಮೌಲ್ಯ ಮಾಪನ) ಇವರು ಕಾರ್ಯ ನಿರ್ವಹಿಸುತ್ತಿದ್ದಾರೆ. | 56 |
| 20. | ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ | - | - | 75 |
| 21. | ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ | - | 01 | 15 |
| 22. | ಹಾವೇರಿ ವಿಶ್ವವಿದ್ಯಾಲಯ | - | - | 58 |
| 23. | ಗುಲ್ಬರ್ಗಾ ವಿಶ್ವವಿದ್ಯಾಲಯ | - | - | 172 |
| 24. | ನೃಪತುಂಗ ವಿಶ್ವವಿದ್ಯಾಲಯ | ಖಾಲಿಯಿದ್ದು, ಪ್ರಸ್ತುತ ಪ್ರಭಾರದಲ್ಲಿ ಹಿರಿಯ ಪ್ರಾಧ್ಯಾಪಕರು ಕಾರ್ಯ ನಿರ್ವಹಿಸುತ್ತಿದ್ದಾರೆ. | - | 100 |
| 25. | ಕರ್ನಾಟಕ ಜಾನಪದ ವಿಶ್ವವಿದ್ಯಾಲಯ | - | - | - |
| 26. | ಆದಿ ಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು | - | - | 28 |
| 27. | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ | - | - | 23 |
| 28. | ಮೈಸೂರು ವಿಶ್ವವಿದ್ಯಾಲಯ | - | - | 402 |
| 29. | ಕೊಪ್ಪಳ ವಿಶ್ವವಿದ್ಯಾಲಯ | ಖಾಲಿ ಇದೆ | ಖಾಲಿಇದೆ | 12 |
| 30. | ಚಾಮರಾಜ ನಗರ ವಿಶ್ವವಿದ್ಯಾಲಯ | - | 01 | 36 |
| 31. | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ | - | - | 92 |
| 32. | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ | - | - | 65 |